‘ಇಲ್ಲೇ ಕಿಡಕ್ಯಾಗ ಸಿಗ್ನಲ್ ಛಲೋ ಬರತದ’ ಅನ್ನುತ್ತಾ ಅವರ ಪಕ್ಕವೇ ನಿಂತು ಫೋನಿನಲ್ಲಿ ಒದರಿ ಮಾತಾಡುವುದು, ಅವರು ಅತ್ತ ರಾಹುಲನನ್ನು ಕರೆಯಲು ಶಾಲೆಗೆ ಹೋದರೆ ಇತ್ತ ಹೇಳದೆ ಕೇಳದೆ ಅವನನ್ನು ತಾನು ಕರಕೊಂಡು ಬಂದುಬಿಡೋದು ಇತ್ಯಾದಿ ಮಾಡತೊಡಗಿದ. ಈ ಆಟ ಒಂಥರಾ ಮೋಜೆನಿಸಿಬಿಟ್ಟಿತವನಿಗೆ. ಅದರಲ್ಲೂ ಹೇಳದೆ ಕೇಳದೆ ರಾಹುಲನನ್ನು ಶಾಲೆಯಿಂದ ಕರೆತಂದಾಗ ಕೈಯಾಗಿನದೇನೋ ಗಬಕ್ಕನೆ ಕಸಗೊಂಡವರಂತೆ ಪೆಚ್ಚಾಗುತ್ತಿದ್ದ ಅವರ ಮುಖ ನೋಡಿ ನಗು ಬರುತ್ತಿತ್ತು. ಆದರೆ, ಅಪ್ಪ ಮಾತ್ರ ಇವನ ಸಂಚು ತಮಗೆ ತಿಳಿದೇ ಇಲ್ಲವೇನೋ ಎಂಬಂತೆ, “ನಿನಗ ರಗಡ ಕೆಲಸಾ ಇರ್ತಾವ ನಾ ಕರಕೊಂಡು ಬರತಿದ್ದೆನಲ್ಲ” ಅಂದರೆ, ‘ಬಿದ್ದರೂ ಮೀಸೆ ಮಣ್ಣಾಗದವರು’ ಅಂತ ಮನದಲ್ಲೇ ಹಂಗಿಸುತ್ತಿದ್ದ. ಆದರೆ, ಬರಬರುತ್ತ ಅವರು, “ಏನೋ ರಮೇಶಾ ಇವತ್ತು ನೀ ಹೋಗ್ತೀಯೋ ಹುಡುಗನನ್ನು ಕರೆತರಲು, ಇಲ್ಲಾ ನಾ ಹೋಗಲೋ?” ಅಂತ ನೇರವಾಗೇ ಕೇಳತೊಡಗಿದಾಗ ಆಟ ಮಜಾ ಕಳಕೊಂಡಂತೆನಿಸಿ ಬಿಟ್ಟುಬಿಟ್ಟ.

ರಾತ್ರಿ ಹಾಸಿಗೆಯಲ್ಲೊರಗಿ ರಮೇಶ ‘ಆಪಕೀ ಫರಮಾಯಿಶ್’ ಹಚ್ಚುವ ಹೊತ್ತಿಗೆ ನಳಿನಿ ಅಡುಗೆಮನೆಯ ಕೆಲಸ ಮುಗಿಸಿ ಕೋಣೆಗೆ ಬಂದಳು. ತನ್ನನ್ನೇ ದಿಟ್ಟಿಸುತ್ತಾ ಕೂತವಳ ಕಣ್ತುಂಬಾ ಅಚ್ಚರಿ ತುಂಬಿದ ಪ್ರೀತಿ ಕಂಡು ‘ಏನು?’ ಅಂತ ಕಣ್ಸನ್ನೆಯಿಂದಲೇ ಕೇಳಿದ.

“ಏನಿಲ್ಲ, ನೀವು ಹಿಂಗ ರಾತ್ರಿ ಮಹಮ್ಮದ ರಫಿಯ ಹಾಡು ಕೇಳೋಮುಂದ ಎಷ್ಟು ಖುಷೀಲೇ ಇರ್ತೀರಿ. ಮುಂಜಾನ್ಯಾತಂದ್ರ ಬ್ಯಾರೇನ ಮನಷ್ಯಾ ಆಗ್ತೀರಿ ಯಾಕಂತ?...” ಅನ್ನುತ್ತಾ ನಿಲ್ಲಿಸಿದಳು.

ರಮೇಶ ನಿಟ್ಟುಸಿರಿಟ್ಟ. ‘ಅಪ್ಪನಂತೆ ಇಲ್ಲಾ – ಅಪ್ಪನಿಗಿಂತ ಬ್ಯಾರೆ; ನನಗೆ ಇಡೀ ಜಗತ್ತೇ ಹೀಗೆ ಎರಡೇ ಬಗೆಯಾಗಿ ಕಾಣ್ತದ. ಮತ್ತು ಆ ಎರಡೂ ಭಾಗಗಳ ನಡುವಿನ ಗೆರೆ ಅಳಿಸಿಹೋಗದಂತೆ, ಆ ಕಡೆಯದ್ದೇನೂ ಈ ಕಡೆ ಬರದಂತೆ ಹಗಲಿಡೀ ಕಣ್ಣಲ್ಲಿ ಕಣ್ಣಿಟ್ಟು ಕಾಯಬೇಕಾಗ್ತದ, ಅದಕ್ಕೆ ಅಂತ್ಹೇಳಲೆ?’ ಅಂತ ಯೋಚಿಸಿದ.

“ಅರೆ, ಅದಕ್ಯಾಕೆ ಇಷ್ಟು ವಿಚಾರ ಮಾಡ್ತೀರಿ? ಬರೇ ರಾತ್ರಿ ಖುಷಿಯಾಗಿದ್ರ ಸುದ್ದಾ ಅರ್ಧಾ ಜೀವನ ನೀವು ಖುಷಿಯಾಗೇ ಕಳದ್ಹಂಗ ತಗೋಳ್ರಿ” ಅಂದವಳೇ ನಳಿನಿ ನಗಲಾರಂಭಿಸಿದಳು. ‘ಇಕೀ ಹಂಗ ಮಾತುಮಾತಿಗೆ ನನಗ ನಗೆ ಯಾಕ ಬರಂಗಿಲ್ಲ?’ ಅಂತ ವಿಚಾರ ಮಾಡುತ್ತ ಇವ ಬಿದ್ದುಕೊಂಡ.

ಮರುದಿನ ಎಂದಿನಂತೆ ಅಪ್ಪ ನಸುಕಲ್ಲೇ ಸ್ನಾನ ಮಾಡಿ ಒದ್ದೆ ಪಂಚೆಯಲ್ಲೇ ಬಾಲ್ಕನಿಗೆ ಹೋಗಿ ತಂತಿಯಿಂದ ಟವಲು ಜಗ್ಗಿಕೊಳ್ಳುವಾಗ ಸಪಾಟು ಫರಸಿಯ ಮೇಲೆ ಕಾಲ್ಜಾರಿತ್ತೋ ಏನೋ ‘ರಮೇಶಾ’ ಅಂತ ಕಿರುಚಿಕೊಂಡಿದ್ದರು. ಧಡಬಡಿಸಿ ಬಂದು ಇಬ್ಬರೂ ತೋಳ ಕೆಳಗೆ ಕೈ ಹಾಕಿ ಹಾಸಿಗೆತನಕ ಕರೆತಂದು ಮಲಗಿಸಿದ್ದರು. ಆಮೇಲೆ ದವಾಖಾನೆಗೆ ಹೋಗಲೆಂದು ನೆರೆಮನೆಯವರ ಸಹಾಯದಿಂದ ಕುರ್ಚಿಯಲ್ಲಿ ಕೂರಿಸಿ ಗಣಪನನ್ನು ಹೊತ್ತೊಯ್ಯುವಂತೆ ಅನಾಮತ್ತು ಎತ್ತಿ ಲಿಫ್ಟಿನಲ್ಲಿರಿಸಿ ಕೆಳಗೆ ತಂದು ಟ್ಯಾಕ್ಸಿಯಲ್ಲಿ ಮಲಗಿಸುವ ತನಕ ಬೆವರಿಳಿದುಹೋಗಿತ್ತು. ಪಾದ ಬರೀ ಉಳುಕಿತ್ತಾದರೂ ಬೀಳುವಾಗ ಗಟ್ಟಿ ನೆಲಕ್ಕೆ ಊರಿದ್ದ ಎಡ ಮುಂಗೈ ಎಲುಬಲ್ಲಿ ಸಣ್ಣ ಗೀಟಿನಷ್ಟು ಬಿರುಕಾಗಿತ್ತು. ಆಸ್ಪತ್ರೆ, ಬ್ಯಾಂಡೇಜು, ಗುಳಿಗೆ, ಔಷಧಿ ಎಲ್ಲಾ ಆದಮೇಲೂ ರಾಮರಾಯರು ಯಾಕೋ ತೀರ ಖಿನ್ನರಾಗಿದ್ದರು. ನಳಿನಿ ಒಂದೆರಡು ಸಲ, “ಭಾಳ ನೋವಾಗ್ತದೇನು ಮಾಮಾ? ಕಾಂಬಿಫ್ಲೇಮ ಗುಳಿಗಿ ಕೊಡಲೇನು?” ಅಂತ ಕೇಳಿದರೆ, “ಏ ಬ್ಯಾಡಾ ಏನಂಥಾ ನೋವಿಲ್ಲ ಬಿಡವ್ವಾ” ಅಂದರು. ವಾರದ ಮೇಲೆ ಅವರಿಗೆ ಸ್ನಾನಕ್ಕೆಂದು ನೀರು ತೋಡಿದ ನಳಿನಿ ರಮೇಶನನ್ನು, “ಜಳಕಕ್ಕೆ ಹಾಕಲಿಕ್ಕೆ ಬರ್ರಿ” ಎಂದು ಕೂಗಿದಾಗ ಒಮ್ಮೆಲೆ ಇವನಿಗೆ ಅವರ ಮುಜುಗರದ ಕಾರಣ ಅರಿವಾಗಿತ್ತು. ಯಾರ ಕೈಲಿ ಏನೇ ಸೇವಾ ಮಾಡಿಸಿಕೊಳ್ಳಬೇಕಾಗಿಬಂದ್ರೂ ಜೀವ ಬಾಯಿಗೆ ಬರುವ ಪೈಕಿ ಅವರು ಅಂತ ಗೊತ್ತಿದ್ದವ ಅವರ ಮುಖದ ಕಡೆಗೇ ನೋಡದೇನೇ ಶರಟಿನ ಗುಂಡಿ ಬಿಚ್ಚುತ್ತಾ, “ಕೈ ಒಂಚೂರು